

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೬

**ಮಿ.** ಡ್ಯಾಡಿಯವರು ತಮ್ಮ ಮನೆಗೆ ಸೇರಿಕೊಂಡಂತೆಯೇ ಇದ್ದ ಮತ್ತೊಂದು ಬಂಗಲೆಯಲ್ಲಿ ವಿರಜಾನಂದರಿಗೆ ಮತ್ತು ಅವರೊಂದಿಗೆ ಬಂದಿದ್ದ ಸಂನ್ಯಾಸಿಗಳಿಗೆ ಇರಲು ವ್ಯವಸ್ಥೆ ಮಾಡಿದ್ದರು. ಎಪ್ಪತ್ತು ವಯಸ್ಸಿನ ಡ್ಯಾಡಿಯವರು ತಮ್ಮ ಮಕ್ಕಳಿಗಷ್ಟೇ ಅಲ್ಲದೆ, ಸಂಸಾರ-ಬಂಧ-ಮುಕ್ತರಾದ ವೈರಾಗಿಗಳಿಗೂ ಸಹ ನಿಜಕ್ಕೂ 'ಡ್ಯಾಡಿ'ಯೇ (ವಾತ್ಸಲ್ಯಮಯ ಪಿತ) ಆಗಿದ್ದರು. ಒಂದು ದಿನ ಅವರು ಆವೇಗ ತುಂಬಿದ ಧ್ವನಿಯಲ್ಲಿ, ''ನೀವೆಲ್ಲರೂ ಸಮಾಜಕ್ಕಾಗಿ ಎಷ್ಟೊಂದು ಶ್ರಮವಹಿಸುತ್ತೀರಿ. ಜನ ನಿಮ್ಮ ಕೆಲಸ ಮತ್ತು ಸಂಸ್ಥೆಗಳ ಪ್ರಶಂಸೆ ಮಾಡುತ್ತಾರೆಯೇ ಹೊರತು, ನಿಮ್ಮ ವೈಯಕ್ತಿಕ ಜೀವನದ ಬಗ್ಗೆ ಯಾರು ತಾನೇ ಚಿಂತಿಸುತ್ತಾರೆ? ನಿಮ್ಮ ಅನ್ನ-ವಸ್ತ್ರಗಳ ವ್ಯವಸ್ಥೆಯೇನು? ಅಹರ್ನಿಶಿ ಶಾರೀರಿಕ ಹಾಗೂ ಮಾನಸಿಕವಾಗಿ ದುಡಿಯಲು ಸಾಧ್ಯವಾಗುವಂತೆ ಪುಷ್ಟಿಕರ ಆಹಾರ ದೊರೆಯುತ್ತದೆಯೇ ಅಥವಾ ಅನಾರೋಗ್ಯವಾದರೆ ಔಷಧ-ಪಥ್ಯಗಳು ದೊರೆಯುತ್ತವೆಯೇ ಇಲ್ಲವೆ.. ಇತ್ಯಾದಿಯಾಗಿ ಯಾರು ತಾನೇ ಭಾವಿಸುತ್ತಾರೆ?'' ಎಂದು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ಬೇಲೂರು ಮಠದಲ್ಲಿ ಸಂನ್ಯಾಸಿಗಳ ದೈನಂದಿನ ಆಹಾರದ ಬಗ್ಗೆ ಕೇಳಿ ತಿಳಿದ ಡ್ಯಾಡಿಯವರು ತುಂಬ ಮನೋವೇದನೆಯನ್ನನುಭವಿಸಿದರು. ಅನ್ನ, ಬೇಳೆ ಪಲ್ಯಗಳೊಂದಿಗೆ ಸಾಧುಗಳಿಗೆ ಒಂದು ಚಮಚ ತುಪ್ಪವೂ ಸಿಗುವಂತಾಗಲೆಂದು ಅವರು ಕೆಲವು ಕಾಲ ಮಠಕ್ಕೆ ಹಣವನ್ನು ಕಳುಹಿಸುತ್ತಿದ್ದರು.

ಮಿ. ಡ್ಯಾಡಿಯವರ ಆತಿಥ್ಯವನ್ನು ವಿರಜಾನಂದರು ಒಂದು ವಾರ ಸ್ವೀಕರಿಸಿದ್ದರು. ಪ್ರತಿದಿನವೂ ಡ್ಯಾಡಿಯವರು ಮಹಾರಾಜರನ್ನೂ, ಸಂಗಡಿಗರನ್ನೂ ದೂರದೂರದ ಪ್ರೇಕ್ಷಣೀಯ ಸ್ಥಳಗಳಿಗೆ ಮೋಟಾರು ಗಾಡಿಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಮಹಾರಾಷ್ಟ್ರದ ಪ್ರಸಿದ್ಧ ಸಂತರಾದ ಜ್ಞಾನೇಶ್ವರರ ಕ್ಷೇತ್ರವಾದ ಆಳಂದಿಯನ್ನು ಒಂದು ದಿನ ನೋಡಿಕೊಂಡು ಬಂದರು. ಅಲ್ಲಿಯ ಮಂದಿರದಲ್ಲಿ ವಿರಜಾನಂದರು ಪೂಜೆಯನ್ನು ಸಲ್ಲಿಸಿದರು. ಮತ್ತೊಂದು ದಿನ ಸಂತ ತುಕಾರಾಮರ ಜನ್ಮಸ್ಥಳಕ್ಕೆ ಹೋದರು. ಅಲ್ಲಿಯ 'ಮಹಂತ'ರು (ಮುಖ್ಯಸ್ಥರು) ತುಕಾರಾಮರ ಸ್ವಹಸ್ತ ಲಿಖಿತ 'ಅಭಂಗ'ಗಳನ್ನು ಎಲ್ಲರಿಗೂ ತೋರಿಸಿದರು. ಅಲ್ಲಿಂದ ಮೂರು ಮೈಲಿ ದೂರದಲ್ಲಿರುವ ಇಂದ್ರಾ ನದೀ ತೀರದಲ್ಲಿ ಪರ್ವತ ಶ್ರೇಣಿಯು ಕಂಡುಬರುತ್ತಿತ್ತು. ಸಂತ ತುಕಾರಾಮರು ಅಲ್ಲಿಗೆ ನಿತ್ಯವೂ ಧ್ಯಾನಾಭ್ಯಾಸಕ್ಕಾಗಿ ಹೋಗುತ್ತಿದ್ದರಂತೆ. ಮತ್ತೊಂದು ದಿನ ಪುಣೆಯಿಂದ ೧೬ ಮೈಲು ದೂರದಲ್ಲಿರುವ ಐತಿಹಾಸಿಕ ಸ್ಥಳವಾದ 'ತೆಲೆಗಾಂ' ಯುದ್ಧಕ್ಷೇತ್ರವನ್ನು ನೋಡಿಕೊಂಡು ಬಂದರು. ಪುಣೆಯಿಂದ ಹೊರಡುವ ಮುನ್ನ 'ದಕ್ಷಿಣ ಭಾರತ ಯುವಕ ಸಂಘ'ದವರಿಗೆ ಕೊಟ್ಟ ಮಾತಿನಂತೆ ಸಭೆಯೊಂದಕ್ಕೆ ಹೋದರು. ಈ ಸಭೆಯನ್ನು ಮಹಾಪುರುಷ ಮಹಾರಾಜರಿಂದ ದೀಕ್ಷೆಯನ್ನು ಪಡೆದಿದ್ದ ಸರ್ದಾರ್ ಮೊದಲಿಯಾರ್ ಎಂಬ ವಯೋವೃದ್ಧರ ಮನೆಯಲ್ಲಿ ಆಯೋಜಿಸಲಾಗಿತ್ತು. ಇಲ್ಲಿ ವಿರಜಾನಂದರು ಸುಮಾರು ಒಂದು ಗಂಟೆ ಕಾಲ ಸ್ವಾಮೀಜಿಯವರ ಸಾಂಗತ್ಯದ ನೆನಪುಗಳನ್ನು ಬಣ್ಣಿಸಿ ಎಲ್ಲರಿಗೂ ತೃಪ್ತಿಯನ್ನಿತ್ತರು. ಪುಣೆಯಲ್ಲಿ ಹಲವಾರು ಸಂಸ್ಥೆಗಳನ್ನು ಸಹ ನೋಡಲು ಮಹಾರಾಜರು ಹೋಗಿದ್ದರು. ಕೆಲ ದಿನಗಳ ಮಟ್ಟಿಗೆ ಮಹಾಬಲೇಶ್ವರ ಪರ್ವತಕ್ಕೆ ಹೋಗುವುದೆಂದು ಆಯೋಜಿಸಲಾಗಿತ್ತು. ಆದರದು ಕಾರ್ಯಗತವಾಗಲಿಲ್ಲ.

ಮುಂಬೈಗೆ ಹಿಂದಿರುಗಿ, ಅಲ್ಲಿ ಇದ್ದ ನಾಲ್ಕು ದಿನಗಳ ಮಧ್ಯದಲ್ಲೇ, ಎರಡು ದಿನ ಸಾಯಂಕಾಲ ಸುಮಾರು ನಾನೂರು ಮಂದಿ ಶ್ರೋತೃಗಳಿಗೆ ಮಠದ ಹಿಂದಿನ ದಿನಗಳ ಬಗ್ಗೆ ತಿಳಿಸಿದರು ಮತ್ತು ಸ್ವಾಮೀಜಿಯವರ ಬಗ್ಗೆ ಪ್ರಶಂಸಿಸಿದರು. ಸ್ವಾಮೀಜಿಯವರ ಸಮಕಾಲೀನರೂ ಹಿಂದೊಮ್ಮೆ ಪತ್ರಕರ್ತರೂ ಆಗಿದ್ದ ನಗೇಂದ್ರನಾಥ ಗುಪ್ತ ಎಂಬುವರು ಆ ಸಮಯದಲ್ಲಿ ಮುಂಬೈಯಲ್ಲೇ ಇದ್ದರು. ಅವರು ಒಂದು ದಿನ ಆಶ್ರಮಕ್ಕೆ ಭೇಟಿಯಿತ್ತು ಮಹಾರಾಜರ ದರ್ಶನ ಮಾಡಿಕೊಂಡು ಹೋದರು.

ವಿರಜಾನಂದರು ಡಿಸೆಂಬರ್ ೯ರಂದು ಮುಂಬೈಯನ್ನು ಬಿಟ್ಟು ಮಾರನೇ ದಿನ ಬೆಳಗ್ಗೆ ನಾಗಪುರವನ್ನು ತಲುಪಿ, ಅಲ್ಲಿ ಮೂರು ದಿನಗಳಿದ್ದರು. ಅಲ್ಲಿ ಅನೇಕ ಮರಾಠಿ ದೀಕ್ಷಾರ್ಥಿಗಳಿದ್ದು ಅವರಲ್ಲಿ ೧೦-೧೨ ಮಂದಿ ಕಾಲೇಜಿನ ಯುವಕರೂ ಇದ್ದರು. ಅವರಲ್ಲಿದ್ದ ಜ್ಞಾನ-ವೈರಾಗ್ಯ ಮತ್ತು ಸೇವೆಯ ಮನೋಭಾವನೆಗಳನ್ನು ಕಂಡು ಮಹಾರಾಜರು ಸಂತೃಪ್ತರಾದರು. ಯಾವ ಆಧ್ಯಾತ್ಮಿಕತೆಯ ಮೇಲಿನ ಅನುರಾಗವು ಜನರನ್ನು ನಿಸ್ವಾರ್ಥಿಗಳನ್ನಾಗಿಯೂ, ನಿಸ್ಪೃಹರನ್ನಾಗಿಯೂ ಮತ್ತು ಸೇವಾತತ್ಪರರನ್ನಾಗಿಯೂ ಮಾಡುವುದೋ ಅದೇ ತಾನೇ ಶ್ರೀರಾಮಕೃಷ್ಣ-ವಿವೇಕಾನಂದರ ಅಳತೆಗೋಲಿನಲ್ಲಿ ಅತ್ಯಮೂಲ್ಯವಾದುದು! ನಾಗ



ಪುರದ ಆಶ್ರಮವು ಇಂತಹ ಅಳತೆಗೋಲಿಗೆ ಪ್ರಾಮುಖ್ಯತೆಯನ್ನು ನೀಡಿದೆಯೆಂದು ತಿಳಿದು ಸಂಘಾಧ್ಯಕ್ಷರು ಸಂತೋಷಿಸಿದರು.

ಡಿಸೆಂಬರ್ ೧೪ರಂದು ಮಹಾರಾಜರು ಬೇಲೂರು ಮಠವನ್ನು ತಲುಪಿದರು. ಎಂಟು ತಿಂಗಳವರೆಗೆ ಅವರು ಮಠದಲ್ಲಿರಲಿಲ್ಲ. ನಾನಾ ಆಸೆ-ಆಕಾಂಕ್ಷೆಗಳನ್ನು ಹೊತ್ತ ನೂರಾರು ಭಕ್ತಾದಿಗಳು ಅವರಿಗೋಸ್ಕರ ಅಲ್ಲಿ ಕಾಯುತ್ತಿದ್ದರು. ಯಾವುದೇ ರೀತಿಯ ವಿಧಿ-ನಿಷೇಧಗಳನ್ನು ಒಡ್ಡಿ ಈ ಭಕ್ತರನ್ನು ದೂರವಿಡುವುದು ಅಸಾಧ್ಯದ ಕೆಲಸವಾಗಿತ್ತು. ನಿತ್ಯವೂ ನೂರಾರು ದರ್ಶನಾರ್ಥಿಗಳೊಂದಿಗೆ ಸಂದರ್ಶನ, ಎಲ್ಲರ ಪ್ರಶ್ನೆಗಳಿಗೆ ತಕ್ಕುದಾದ ಉತ್ತರವನ್ನೀಯುವುದು, ದೀಕ್ಷಾರ್ಥಿಗಳಿಗೆ ಸಾಧನೆಯ ಬಗ್ಗೆ ಮಾರ್ಗದರ್ಶನವನ್ನೀಯುವುದು, ಇವೆಲ್ಲವೂ ನಿರಂತರವಾಗಿ ಸಾಗಿತ್ತು. ಇದರೊಂದಿಗೆ ಮಠ-ಮಿಷನ್ನಿನ ನಾನಾ ವಿಭಾಗಗಳ ಪರಿಚಾರಕರಿಗೆ ಕೆಲಸ ಕಾರ್ಯಗಳ ಸಂಬಂಧವಾಗಿ ಸಲಹೆ ನೀಡುವುದು ಸಹ ಇತ್ತು. ವಿರಜಾನಂದರಿಗೆ ಶರೀರದಲ್ಲಿ ದುರ್ಬಲತೆಯು ಕಾಣಿಸಿಕೊಂಡಿತು. ಮುಂಬೈನಲ್ಲಿಯೇ ಈ ಬಲಹೀನತೆ ಕಾಣಿಸಿಕೊಂಡಿತ್ತು. ಜರ್ಮನ್ನಿನ ಯೆಹೂದಿ ಹೃದಯ ತಜ್ಞರೊಬ್ಬರು ಮುಂಬೈನಲ್ಲಿ ಇವರನ್ನು ಪರೀಕ್ಷಿಸಿ ಮುಂಜಾಗ್ರತೆ ವಹಿಸಬೇಕೆಂದು ತಿಳಿಸಿದ್ದರು. ವಿರಜಾನಂದರು ಮಠಕ್ಕೆ ಬಂದಾಗಿನಿಂದ ಜ್ವರ ಬಂದಂತಾಗಿತ್ತು. ಪ್ರಸಿದ್ಧ ಹೋಮಿಯೋಪತಿ ಚಿಕಿತ್ಸಕರೂ, ಮಠದ ವಿಶೇಷ ಸ್ನೇಹಿತರೂ ಆದ ಜಿತೇಂದ್ರನಾಥ ಮಜುಮ್‌ದಾರ್ ಎಂಬುವರು ಮಹಾರಾಜರಿಗೆ ಚಿಕಿತ್ಸೆಯನ್ನು ಮಾಡಿದರು.

೧೯

ಇಂದು ೧೯೪೦ರ ೧ನೇ ಜನವರಿ. ೧೮೮೬ರ ಇದೇ ತಾರೀಖಿನಂದು ಶ್ರೀರಾಮಕೃಷ್ಣರು ಅಹೇತುಕ ಕರುಣೆಯಿಂದ, ಭಾವಾವೇಶದಲ್ಲಿ ಅನೇಕ ಭಕ್ತರನ್ನು ಸ್ಪರ್ಶಿಸಿ 'ಚೈತನ್ಯ ಉಂಟಾಗಲಿ' ಎಂದು ಹರಸಿದ್ದರು. ಇದರ ಫಲವಾಗಿ ಅವರೆಲ್ಲರಲ್ಲೂ ಅಲೌಕಿಕ ಅನುಭೂತಿಗಳುಂಟಾಗಿದ್ದವು. ಶ್ರೀರಾಮಕೃಷ್ಣ ಭಕ್ತ ಸಮೂಹದಲ್ಲಿ ಈ ವಿಶೇಷ ದಿನವನ್ನು ಸಾಂಕೇತಿಕವಾಗಿ 'ಕಲ್ಪತರು ದಿನ' ಎಂದು ಕರೆದಿದ್ದಾರೆ. ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಯಥಾವತ್ತಾಗಿ ಬರೆದಿರುವ ಸ್ವಾಮಿ ಶಾರದಾನಂದರು ತಮ್ಮ 'ಶ್ರೀ ಶ್ರೀ ರಾಮಕೃಷ್ಣ ಲೀಲಾಪ್ರಸಂಗ' ಎಂಬ ಗ್ರಂಥದಲ್ಲಿ ಈ ಅಪೂರ್ವ ಸನ್ನಿವೇಶವನ್ನು ಮನೋಜ್ಞವಾಗಿ ವರ್ಣಿಸಿದ್ದಾರೆ; ಆದರೆ 'ಕಲ್ಪತರು' ಎಂಬ ಪದವನ್ನು ಬಳಸಿಲ್ಲ. ಈ ಅಧ್ಯಾಯಕ್ಕೆ 'ಆತ್ಮಪ್ರಕಾಶ ಮತ್ತು ಅಭಯದಾನ' ಎಂಬ ಶೀರ್ಷಿಕೆಯನ್ನಿಟ್ಟಿದ್ದಾರೆ. ೧೮೮೬ರ ಜನವರಿ ೧ ರಂದು ಶ್ರೀರಾಮಕೃಷ್ಣ ದೇವರ ಈ ಅಯಾಚಿತ ಕರುಣೆಯನ್ನು ಕಲ್ಪವೃಕ್ಷದ ಕೃಪಾವರ್ಷಣಕ್ಕೆ ಹೋಲಿಸಿ ರೂಢಿಗೆ ತಂದದ್ದು ಭಕ್ತರಾದ ರಾಮಚಂದ್ರ ದತ್ತರಿರಬಹುದು.

೫೪ ವರ್ಷಗಳ ನಂತರ ೧೯೪೦ರ ಜನವರಿ ೧ರಂದು ಕಲ್ಪತರು ದಿನವೂ ಶ್ರೀಮಾತೆಯವರ ಶುಭತಿಥಿಯೂ ಮೇಳೈಸಿದೆ. ಮಠದಲ್ಲಿ ವಿಪುಲವಾಗಿ ಭಕ್ತ ಸಮಾಗಮವಾಗಿದೆ. ಹೀಗಿರುವಾಗ ಮಠಾಧ್ಯಕ್ಷರು ಅವರಿಂದ ತಪ್ಪಿಸಿಕೊಳ್ಳುವ ಬಗೆಯಾದರೂ ಹೇಗೆ? ಸಮಾರಂಭ ಮುಕ್ತಾಯವಾಗುವ ಹೊತ್ತಿಗೆ ರಾತ್ರಿಯಾಗಿ ವಿರಜಾನಂದರ ಶರೀರಕ್ಕೆ ಅವಸಾನ ಕಾಲವೇ ಸನ್ನಿಹಿತವಾದಂತಾಗಿತ್ತು. ಆದರೆ ಮಾಡುವುದೇನು? ಗುರು ವಿವೇಕಾನಂದರ ಬಾಯಲ್ಲಿ ಕೇಳಿದ್ದರಲ್ಲ, 'ಸಂನ್ಯಾಸದ ಅರ್ಥ ... ಮೃತ್ಯುವನ್ನು ಪ್ರೀತಿಸುವುದು' ಎಂದು!

ವಿರಜಾನಂದರಿಗೆ ಜ್ವರದ ಭಾವವಿನ್ನೂ ಬಿಟ್ಟಿರಲಿಲ್ಲ. ಹೋಮಿಯೋಪತಿ ಚಿಕಿತ್ಸೆಯ ಬದಲಿಗೆ ಡಾ. ಅಜಿತನಾಥರಾಯ್ ಚೌಧುರಿಯವರ ಸಲಹೆ ಮೇರೆಗೆ ಅಲೋಪತಿ ಚಿಕಿತ್ಸೆಯನ್ನು ಪ್ರಾರಂಭಿಸಲಾಯಿತು. ವಿವಿಧ ವೈದ್ಯಕೀಯ ತಪಾಸಣೆಗಳು ನಡೆದವು. ಆದರೆ ಕಾರಣವನ್ನು ಮಾತ್ರ ತಿಳಿಯಲಾಗಲಿಲ್ಲ. ಜನವರಿ ೧೫ರಂದು ಶಾರದಾನಂದ ಮಹಾರಾಜರ ಜನ್ಮದಿನ. ಅಂದು ಬಾಗ್‌ಬಜಾರಿನಲ್ಲಿರುವ 'ಮಾಯೇರ್ ಬಾಡಿ'ಯ ಸಮಾರಂಭ

ದಲ್ಲಿ ಮಹಾರಾಜರು ಪಾಲ್ಗೊಂಡು ಹಿಂದಿರುಗಿದರು. ಇತ್ತ ಬಾಂಕುರಾ ಕಡೆಯಿಂದ ಮಹಾರಾಜರಿಗೆ ಕರೆ ಬಂದಿತ್ತು, 'ಅಲ್ಲಿಯ ಗ್ರಾಮವಾಸಿಗಳಿಗೆ ಹಣದ ಅಭಾವದಿಂದಾಗಿ ಬೇಲೂರು ಮಠಕ್ಕೆ ಹೋಗಲಾಗುತ್ತಿಲ್ಲ, ಆದ್ದರಿಂದ ಅಲ್ಲಿಯ ಆಶ್ರಮಕ್ಕೆ ದಯ ಮಾಡಿಸಿ, ಸ್ವಲ್ಪ ದಿನಗಳಿದ್ದು ಅವರೆಲ್ಲರ ಆಸೆಯನ್ನು ಪೂರ್ಣ ಗೊಳಿಸಬೇಕು' ಎಂದು. ವಿರಜಾನಂದರು ತಮ್ಮ ಸೇವಕರನ್ನು ಕರೆದು, 'ಅವರಿಗೆ ಬರೆದು ತಿಳಿಸು, ಇಷ್ಟರಲ್ಲೇ ಏನಾದರೂ ಶರೀರ ಸ್ವಾಸ್ಥ್ಯವುಂಟಾದರೆ ಹೋಗುತ್ತೇನೆ; ಹೋಗಲೇನೋ ಬಹಳ ಇಷ್ಟ. ಈಗಂತೂ ಶರೀರ ತುಂಬ ಬಳಲಿದೆ' ಎಂದರು.

ವಿರಜಾನಂದರ ಪತ್ರ ತಲುಪಿದ್ದೇ ತಡ, ಬಾಂಕುರಾ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮಹೇಶ್ವರಾನಂದರು ಪ್ರಯಾಣದ ಖರ್ಚಿನ ಹಣವನ್ನು ಮಠಕ್ಕೆ ಕಳುಹಿಸಿಬಿಟ್ಟಿದ್ದಾರೆ. ಇದನ್ನು ತಿಳಿದ ಮಹಾರಾಜರು 'ಮೊದಲೇ ಹಣ ಕಳುಹಿಸಿಬಿಟ್ಟನೆ? ಒಂದು ವೇಳೆ ಹೋಗಲಾಗದಿದ್ದರೇನಂತೆ? ಹಣವನ್ನು ಹಿಂದಕ್ಕೆ ಕಳುಹಿಸಿದರಾಯಿತು!' ಎಂದರು. ಕೊನೆಗೆ ಆದದ್ದೂ ಹಾಗೆಯೇ, ಬಾಂಕುರಾಕ್ಕೆ ಹೋಗುವ ದಿನವನ್ನು ಗೊತ್ತುಪಡಿಸಲಾಗಿತ್ತಾದರೂ, ಹೊರಡುವ ಒಂದು ವಾರಕ್ಕೆ ಮುಂಚೆಯೇ ಮಹಾರಾಜರ ಶರೀರ ಬಹಳಷ್ಟು ಅಸ್ವಸ್ಥಗೊಂಡಿದ್ದರಿಂದ ಪ್ರಯಾಣವನ್ನು ಸ್ಥಗಿತಗೊಳಿಸಬೇಕಾಯಿತು. ಬಾಂಕುರಾದ ಸಾಧು-ಭಕ್ತ ವೃಂದಕ್ಕೆ ಆಗ ಆದ ನಿರಾಸೆಯು ಮುಂದೆ ಎರಡು ವರ್ಷಗಳ ನಂತರ ೧೯೪೨ರ ಫೆಬ್ರವರಿಯಲ್ಲಿ ದೂರವಾಯಿತು. ವಿರಜಾನಂದರ ಭೇಟಿಯಿಂದ ಅಲ್ಲೆಲ್ಲ ಉತ್ಸಾಹದ ಚಿಲುಮೆಯೇ ಹರಿದಿತ್ತು.

ಜನವರಿ ೧೯ರಂದು (೧೯೪೦) ಪ್ರಸಿದ್ಧ ಗಾಯಕರಾದ ಪಂಡಿತ ಓಂಕಾರನಾಥ ಠಾಕೂರ್ ಎಂಬುವರು ಬೇಲೂರು ಮಠಕ್ಕೆ ಬಂದು ರಾಮಕೃಷ್ಣರ ಮಂದಿರದಲ್ಲಿ ಸುಮಾರು, ಎರಡು ಗಂಟೆಗಳ ಕಾಲ ಸಂಗೀತಸುಧೆಯನ್ನು ಹರಿಸಿದರು. ಇಡೀ ಮಂದಿರವು ಗಾನತರಂಗಗಳಿಂದ ಅನುರಣಿತವಾಯಿತು. ಶ್ರೀರಾಮಕೃಷ್ಣರ ವಿಗ್ರಹದ ಮುಂದೆ ಹಾಡುತ್ತ ಹಾಡುತ್ತ ಪಂಡಿತರು ಭಾವಪರವಶರಾಗಿಬಿಟ್ಟರು. ಕೊನೆಗೆ ತಮ್ಮ ಭಾವೋದ್ವೇಗವನ್ನು ಹತ್ತಿಕ್ಕಲಾರದೆ, ಎರಡು ಕೈಗಳಿಂದ ಭಾವಾಶ್ರುಗಳನ್ನು ಒರೆಸಿಕೊಳ್ಳುತ್ತ ಮಂದಿರದ ಹೊರಬಂದರು. ಹೊರಡುವ ಮುನ್ನ ಮಠಾಧ್ಯಕ್ಷರಾದ ಸ್ವಾಮಿ ವಿರಜಾನಂದರನ್ನು ಭೇಟಿಮಾಡಿ, ಸ್ವಲ್ಪ ಹೊತ್ತು ಅವರೊಂದಿಗೆ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸಿದರು.

ಡಾ. ಅಜಿತಬಾಬುಗಳು ಅನೇಕ ರೀತಿಯಲ್ಲಿ ವಿರಜಾನಂದರನ್ನು ಪರೀಕ್ಷಿಸಿ ಕೊನೆಗೊಂದು ದಿನ ಹೀಗೆಂದರು : ''ನಿಜವೇನೆಂದರೆ, ಯಾವ ಕಾರಣದಿಂದ ನಿಮಗೆ 'ಟೆಂಪರೇಚರ್' ಇದೆ ಎಂಬುದನ್ನು ನನಗೆ ಕಂಡುಹಿಡಿಯಲಾಗುತ್ತಿಲ್ಲ''. ಕೆಲವು ದಿನಗಳು ದ್ರವರೂಪದ ಪಥ್ಯವನ್ನೇ ಸೇವಿಸಲು ಸಲಹೆಯಿತ್ತರು.

ಸುಮಾರು ಒಂದು ತಿಂಗಳ ಕಾಲ ವಿರಜಾನಂದರು ಮಜ್ಜಿಗೆ, ಎಳನೀರು, ಕಿತ್ತಳೆ ರಸ ಮುಂತಾದ ದ್ರವ ಪಥ್ಯವನ್ನೇ ಸೇವಿಸಿದರು. ಅವರನ್ನು ಭೇಟಿಮಾಡಲಿಚ್ಛಿಸುವವರಿಗೆ ಸಂದರ್ಶನವನ್ನೂ ನಿರಾಕರಿಸಲಿಲ್ಲ, ದೀಕ್ಷಾರ್ಥಿಗಳಿಗೆ ದೀಕ್ಷೆ ನೀಡುವುದನ್ನೂ ನಿಲ್ಲಿಸಲಿಲ್ಲ. ಇದರಿಂದ ಅತಿ ಪರಿಶ್ರಮವಾಗುತ್ತಿದ್ದರೂ ಅದನ್ನು ಲೆಕ್ಕಿಸುತ್ತಿರಲಿಲ್ಲ. ಅಜಿತ ಬಾಬುಗಳು ಅಲೋಪತಿ ಡಾಕ್ಟರರಾಗಿದ್ದರೂ ಸಹ, ಸ್ಥಳೀಯ ವೈದ್ಯ ಪದ್ಧತಿಯಲ್ಲಿ ಯಾವುದು ಪರಿಣಾಮಕಾರಿ ಎಂದೆನಿಸುತ್ತಿತ್ತೋ ಅದನ್ನೂ ಸಹ ಅವರು ಅನುಸರಿಸಲು ಹೇಳುತ್ತಿದ್ದರು. ಒಂದು ದಿನ ಅವರು ವಿರಜಾನಂದರಿಗೆ ಗೋಮೂತ್ರವನ್ನು ಬಿಸಿ ಮಾಡಿ ಅದರಲ್ಲಿ ಫ್ಲಾನೆಲ್ ಬಟ್ಟೆಯನ್ನದ್ದಿ ಹೊಟ್ಟೆಗೆ ಯಕೃತ್ತಿನ ಭಾಗಕ್ಕೆ ಶಾಖವನ್ನು ಕೊಡುವಂತೆ ಹೇಳಿಹೋದರು. ಇಬ್ಬರು ಸೇವಕರು ವಿರಜಾನಂದರಿಗೆ ಗೋಮೂತ್ರದ ಶಾಖವನ್ನು ಕೊಡುತ್ತಿದ್ದರು. ಆ ಅರ್ಧಗಂಟೆಯ ಕಾಲ ಗೋಮೂತ್ರದ ವಾಸನೆಯನ್ನು ವಿರಜಾನಂದರು ಹಸನ್ಮುಖದಿಂದಲೇ ಸಹಿಸುವುದನ್ನು ನೋಡಬಹುದಾಗಿತ್ತು. ಜನವರಿ ೩೧ರಂದು ಸ್ವಾಮಿ ವಿವೇಕಾನಂದರ ೭೮ನೇ ಜನ್ಮತಿಥಿ. ಅಂದು ಬೆಳಗ್ಗೆ ೧೧ಕ್ಕೆ ವಿರಜಾನಂದರು ಬೇಲೂರು ಮಠದ ಪಶ್ಚಿಮ ಪಾರ್ಶ್ವದಲ್ಲಿ ಒಂದು ವಸತಿ ವಿದ್ಯಾಲಯಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈ ಸಮಾರಂಭಕ್ಕೆ ಅನೇಕ ಗಣ್ಯವ್ಯಕ್ತಿಗಳು ಬಂದಿದ್ದರು.

ಮಾರ್ಚ್ ಎರಡನೇ ವಾರದಲ್ಲಿ ಶ್ರೀರಾಮಕೃಷ್ಣರ ಜನ್ಮೋತ್ಸವವು ನಡೆಯಿತು. ಆ ಪುಣ್ಯದಿನದಂದು ರಾತ್ರಿಯ ಕೊನೆಯ ಯಾಮದಲ್ಲಿ ಮಠಾಧ್ಯಕ್ಷರಾದ ವಿರಜಾನಂದರಿಂದ ಹತ್ತು ಬ್ರಹ್ಮಚಾರಿಗಳು ಸಂನ್ಯಾಸವನ್ನೂ, ೧೪ ವಟುಗಳು ಬ್ರಹ್ಮಚರ್ಯ ದೀಕ್ಷೆಯನ್ನೂ ಪಡೆದುಕೊಂಡರು. ಸಂನ್ಯಾಸ ಪಡೆದವರಲ್ಲಿ ಪಂಡಿತ ರಾಜೇಂದ್ರನಾಥ ಘೋಷ್ ಸಹ ಒಬ್ಬರು. ಅವರು ಸ್ವಾಮಿ ಶುದ್ಧಾನಂದರ ಸಹಪಾಠಿಗಳಾಗಿದ್ದರು ಮತ್ತು ಸ್ವಾಮಿ ವಿವೇಕಾನಂದರನ್ನು ಕಂಡಿದ್ದರು. ಇವರು ತಮ್ಮ ಇಡೀ ಜೀವನವನ್ನು ಶಾಸ್ತ್ರಚರ್ಚೆಯಲ್ಲಿ ಕಳೆದವರು, ವಿಶೇಷವಾಗಿ ವೇದಾಂತದ ಅಧ್ಯವಸಾಯಿ. ಅನೇಕ ಶಾಸ್ತ್ರಗ್ರಂಥಗಳನ್ನು ಅನುವಾದಿಸಿದ್ದರು, ಹಲವು ಗ್ರಂಥಗಳ ಸಂಪಾದಕರೂ ಸಹ ಆಗಿದ್ದರು. ಯಶಸ್ವಿ ಪಂಡಿತರಾದ ಇವರಿಗೆ ಶಾಸ್ತ್ರ ಚರ್ಚೆಯಲ್ಲಿದ್ದ ನಿಷ್ಠೆಯು ತಮ್ಮ ಜೀವನದ ಸಂಧ್ಯೆಯಲ್ಲಿ ಅತ್ಯಂತ ದುರ್ಲಭವಾದ ವೈರಾಗ್ಯವೆಂಬ ಶುಭಫಲವನ್ನು ನೀಡಿತ್ತು. ಸಂನ್ಯಾಸವನ್ನಪ್ಪಲು ತಮ್ಮಲ್ಲಿರುವ ವ್ಯಾಕುಲತೆಯನ್ನು ವ್ಯಕ್ತಪಡಿಸಿ ವಿರಜಾನಂದರಿಗೆ ಪತ್ರವೊಂದನ್ನು ಬರೆದಿದ್ದರು. ವಯಸ್ಸಿನ ದೃಷ್ಟಿಯಿಂದ ಇದಕ್ಕೆ ಮಠದ ನಿಯಮಾವಳಿಗಳ ಅಡ್ಡಿಯಿದ್ದರೂ ಸಹ ವಿರಜಾನಂದರು ಮಠದ ಪ್ರಧಾನ ಸಾಧುಗಳೊಂದಿಗೆ ಪರಾಮರ್ಶಿಸಿ, ಇವರ ವಿಷಯದಲ್ಲಿ ನಿಯಮಗಳನ್ನು ಅತಿಕ್ರಮಿಸಲು ಹಿಂಜರಿಯಲಿಲ್ಲ. 'ಶ್ರೀರಾಮಕೃಷ್ಣ' ನಾಮ್ನಾ ಪ್ರದೀಪ್ತ ಯಜ್ಞಾಗ್ನಿಯ ಸಮ್ಮುಖದಲ್ಲಿ ಹಿಂದಿನ ರಾಜೇಂದ್ರನಾಥ ಘೋಷ್ ಭಸ್ಮೀಭೂತರಾದರು. ಅವರ ಹೊಸ

ಹೆಸರು 'ಸ್ವಾಮಿ ಚಿದ್ಘನಾನಂದ ಪುರೀ' ಎಂದು ಘೋಷಿಸಲ್ಪಟ್ಟಿತು.

ಕಾಶಿಯ ಅದ್ವೈತಾಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭರಾನಂದರು (ಚಂದ್ರ) ಮಾರ್ಚ್ ೧೬ರಂದು ಶ್ರೀ ವಿಶ್ವನಾಥನ ಚರಣದಲ್ಲಿ ಐಕ್ಯರಾದರೆಂಬ ಸಮಾಚಾರವು ಬೇಲೂರು ಮಠವನ್ನು ತಲುಪಿತು. ಅವರು ೩೧ ವರ್ಷಗಳಿಂದಲೂ ಪಾರ್ಶ್ವವಾಯುವಿನಿಂದಾಗಿ ಚಲನಶಕ್ತಿ ಕಳೆದುಕೊಂಡಿದ್ದರೂ ಆ ಆಶ್ರಮದ ಎಲ್ಲ ಜವಾಬ್ದಾರಿಗಳನ್ನೂ ತುಂಬ ನಿಷ್ಠೆ, ತತ್ಪರತೆಗಳಿಂದ ವಿಸ್ಮಯಕರ ರೀತಿಯಲ್ಲಿ ನಿರ್ವಹಿಸಿಕೊಂಡು ಬಂದಿದ್ದರು. ಇವರ ಪ್ರಾಮಾಣಿಕ ಪ್ರಯತ್ನದಿಂದಲೇ ಕಾಶೀ ಆಶ್ರಮದಲ್ಲಿ ಶ್ರೀರಾಮಕೃಷ್ಣರ ಸುಂದರವಾದ ಕಲ್ಲಿನ ಮಂದಿರವು ನಿರ್ಮಿಸಲ್ಪಟ್ಟಿತು. ಮಾರ್ಚ್ ೨೨ರಂದು ಸ್ವಾಮಿ ನಿರ್ಭರಾನಂದರ ನೆನಪಿನಲ್ಲಿ ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣರಿಗೆ ವಿಶೇಷ ಪೂಜೆ ಮತ್ತು ಸಾಧು ಭೋಜನವನ್ನು ನಡೆಸಲಾಯಿತು. ಕಾಶಿಯ ಅದ್ವೈತ ಆಶ್ರಮದಲ್ಲಿಯೂ ಇದೇ ರೀತಿಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಶ್ರೀರಾಮಕೃಷ್ಣ ಮಿಷನ್ನಿನ ಸಂನ್ಯಾಸಿ ಹಾಗೂ ಗೃಹಸ್ಥ ಸದಸ್ಯರ ವಾರ್ಷಿಕ ಸಭೆಯು ಮಾರ್ಚ್ ೨೨ರಂದು ನಡೆಯಿತು. ವಿರಜಾನಂದರೇ ಅಧ್ಯಕ್ಷತೆಯನ್ನು ವಹಿಸಬೇಕಾಯಿತು. ತದನಂತರದ ಮೂರು ದಿನಗಳು ಮಠದ ತ್ರೈವಾರ್ಷಿಕ ಸಂನ್ಯಾಸೀ ಸಮ್ಮೇಳನ ನಡೆಯಿತು. ಮೊದಲ ಅಧಿವೇಶನದಲ್ಲಿ ಮಹಾರಾಜರು ತಮ್ಮ ಲಿಖಿತ ಭಾಷಣ ಮತ್ತು ಆಶೀರ್ವಚನನ್ನು ಓದಿದರು. ಭಾರತದ ಎಲ್ಲ ಶಾಖಾ ಕೇಂದ್ರಗಳಿಂದ ಅನೇಕ ಸಂನ್ಯಾಸಿಗಳು ಬಂದು ಸೇರಿದ್ದರು. ಬೇಲೂರು ಮಠದಲ್ಲಿ ಒಂದು ಚಿಕ್ಕ ಕುಂಭಮೇಳವೇ ನೆರೆದಂತಿತ್ತು!

ಬೇಲೂರು ಮಠದಲ್ಲಿ ಅಂಚೆ ಕಛೇರಿಗಾಗಿ ಹೊಸದಾಗಿ ಕಟ್ಟಡವೊಂದು ನಿರ್ಮಾಣವಾಗಿತ್ತು. ಮಾರ್ಚ್ ೩೦ರಂದು ವಿರಜಾನಂದರು ಅದರ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀರಾಮಕೃಷ್ಣ ಮಿಷನ್ನಿನ ಶಿಶುಮಂಗಲ್ ಸಂಸ್ಥೆಯು ಕೆಲವು ತಿಂಗಳುಗಳ ಹಿಂದೆಯೇ ೯೯, ಲಾನ್ಸ್‌ಡೌನ್ ರಸ್ತೆಯಲ್ಲಿರುವ ತನ್ನ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲ್ಪಟ್ಟಿತ್ತು. ಇದನ್ನೂ ಸಹ ವಿರಜಾನಂದರು ೧೭ನೇ ಏಪ್ರಿಲ್‌ನ ಸಂಜೆ ನೋಡಿಕೊಂಡು ಬಂದರು.

ಬೇಸಿಗೆ ಪ್ರಾರಂಭವಾಗಿದೆ. ಕೆಲವು ತಿಂಗಳುಗಳ ಅನವರತ ಪರಿಶ್ರಮದಿಂದಾಗಿ ವಿರಜಾನಂದರ ಶರೀರವು ಕ್ರಮೇಣ ಬಳಲಿತ್ತು. ಶ್ಯಾಮಲಾತಾಲ್‌ಗೆ ಹೋಗಿ ಕೆಲವು ತಿಂಗಳುಗಳ ವಿಶ್ರಾಂತಿ ಪಡೆಯಲು ಅವರ ಮನಸ್ಸು ಹಾತೊರೆಯುತ್ತಿತ್ತು. ಇತ್ತ ಡಾ. ಅಜಿತನಾಥರಾಯ್ ಚೌಧುರಿಯವರು ಒಂದು ದಿನ ಕರ್ನಲ್ ಡೆನ್ಹಾಮ್ ವೈಟ್‌ರವರನ್ನು ಪರಾಮರ್ಶೆ ಕೇಳಲು ಕರೆದುಕೊಂಡು ಬಂದಿದ್ದರು. ಅವರು ವಿರಜಾನಂದರ ಹೃದಯ ದೌರ್ಬಲ್ಯತೆ ಕಾರಣ ಇನ್ನೂ ಹೆಚ್ಚಿನ ಕಾಳಜಿಯನ್ನೂ, ಎಚ್ಚರಿಕೆಯನ್ನೂ ವಹಿಸಬೇಕೆಂದು ತಿಳಿಸಿ ಹೋದರು. ಐದು ಸಾವಿರ ಅಡಿ ಎತ್ತರದ ಯಾವುದಾದರೊಂದು ಪರ್ವತ ಪ್ರದೇಶಕ್ಕೆ ವಿಶ್ರಾಂತಿಗಾಗಿ ಹೋಗಲು ವೈದ್ಯರ ಅಭ್ಯಂತರವೇನೂ ಇರಲಿಲ್ಲ. ಆದರೆ ಶ್ಯಾಮಲಾತಾಲ್‌ಗೆ ಬೇಡವೆಂದಾಯಿತು. ಏಕೆಂದರೆ ಅಲ್ಲಿ ಡಾಕ್ಟರ್‌ಗಳ ತ್ವರಿತ ಸೇವೆ ಲಭಿಸುವುದು ದುಃಸಾಧ್ಯ. ಕಾರ್ಸಿಯಾಂಗ್ ಅಥವಾ ಕಾಲಿಂಪಾಂಗ್‌ಗೆ ಹೋಗಲು ಅನುಮತಿ ದೊರೆಯಿತು.

* * *

ಕಾರ್ಸಿಯಾಂಗ್ ನಗರದ 'ಪಾಂಖಾಬಾಡೀ ರಸ್ತೆ'ಯಲ್ಲಿರುವ ಸಾಧಾರಣವಾದ ಒಂದು ಮಹಡಿಯ ಮನೆಯೇ ಸಂನ್ಯಾಸಿಗಳ ತಾತ್ಕಾಲಿಕ ವಾಸಸ್ಥಾನ; ಈಗ ಕಳೆದುಂಬಿದೆ. ವಿರಜಾನಂದರು ಸೇವಕರಿಬ್ಬರಲ್ಲದೇ ಇನ್ನೂ ಇಬ್ಬರು ಸಂನ್ಯಾಸಿಗಳ ಜೊತೆಗೆ ಬಂದಿದ್ದಾರೆ. ಶ್ರೀಮಾತೆಯವರಿಂದ ದೀಕ್ಷಿತರಾದ ಡಾ. ದುರ್ಗಾಪದ ಘೋಷ್ ಸಹ ಇವರ ಚಿಕಿತ್ಸಕರಾಗಿ ಜೊತೆಗಿದ್ದಾರೆ. ಅಲ್ಲದೆ ಅವರೊಂದಿಗೆ ಮಠದ ಹಿತಾಕಾಂಕ್ಷಿಗಳೂ ಹಳೆಯ ಸ್ನೇಹಿತರೂ ಆದ ವಿಜಯಕೃಷ್ಣ ಬಸು (ವಿರಜಾನಂದರ ತಮ್ಮ) ಸಹ ಇದ್ದಾರೆ. ನಗರದ ನಿರ್ಜನ ಪ್ರದೇಶದಲ್ಲಿದ್ದ ಈ ಮನೆಯು ವಿರಜಾನಂದರ ಹಳೆಯ ಸ್ನೇಹಿತರಾದ ಯದುನಾಥ ಚಟ್ಟೋಪಾಧ್ಯಾಯರಿಂದ ಮಿಷನ್ನಿಗೆ ದಾನಮಾಡಿದ ಆಸ್ತಿಯಲ್ಲಿ ಸೇರಿತ್ತು. ಮಹಾರಾಜರು ಮಹಡಿಯ ಕೊಠಡಿಯಲ್ಲಿ ಇಳಿದುಕೊಂಡಿದ್ದರು. ಇಲ್ಲಿಯ ವಾತಾವರಣವು ತುಂಬ ಹಿಡಿಸಿತ್ತು. ಇಲ್ಲಿ ಶರೀರವು ಎಷ್ಟೋ ಸುಧಾರಿಸಿಕೊಂಡಿತಾದರೂ ಜ್ವರ ಮಾತ್ರ ಪೂರ್ತಿ ಬಿಟ್ಟಿರಲಿಲ್ಲ. ದಿನವೂ ಸ್ವಲ್ಪ ಓಡಾಡಿಕೊಂಡು ಬರುತ್ತಿದ್ದರು. ಅವರು ಪರ್ವತದ ತಪ್ಪಲಿನುದ್ದಕ್ಕೂ ಹಬ್ಬಿರುವ ಚಹಾದ ತೋಟವನ್ನು ವೀಕ್ಷಿಸುತ್ತಿದ್ದರು. ಮಾಯಾವತಿಯಲ್ಲಿದ್ದಾಗ ಮಹಾರಾಜರು ಸಹ ಚಹಾವನ್ನು ಬೆಳೆದಿದ್ದರು. ಅದು ನೆನಪಿಗೆ ಬರುತ್ತಿತ್ತು. ಕಾರ್ಟ್‌ರೋಡ್ ಹಿಡಿದು ದಾರ್ಜಿಲಿಂಗ್ ಕಡೆಗೆ ಹೋಗುವಾಗ ಅನೇಕ ರಮಣೀಯ ಝುರಿಗಳನ್ನು ಕಾಣಬಹುದಾಗಿತ್ತು. ನಯನಮನೋಹರವಾದ ದೃಶ್ಯ! ಆದರೆ ಅಷ್ಟೊಂದು ಎತ್ತರವನ್ನು ಕ್ರಮಿಸುವುದು ವಿರಜಾನಂದರ ಸದ್ಯದ ಆರೋಗ್ಯದ ಸ್ಥಿತಿಯಲ್ಲಿ ಸಾಧ್ಯವಿರಲಿಲ್ಲ. ಸೇವಕರ ಬಾಯಲ್ಲಿ ಅದರ ವರ್ಣನೆಯನ್ನು ಕೇಳಿ ಅಷ್ಟರಲ್ಲೇ ತೃಪ್ತರಾಗುತ್ತಿದ್ದರು.

ಕಾರ್ಸಿಯಾಂಗ್ ನಗರದಲ್ಲಿ ಶ್ರೀರಾಮಕೃಷ್ಣರ ಕೆಲವು ಭಕ್ತರಿದ್ದರು. ಅವರೆಲ್ಲ ಆಗಾಗ ಹೂಗಳನ್ನು ತೆಗೆದುಕೊಂಡು ಬರುತ್ತಿದ್ದರು. ಮಹಾರಾಜರ ಕೊಠಡಿಯಲ್ಲಿರುವ ರಾಮಕೃಷ್ಣರ ಭಾವಚಿತ್ರವನ್ನು ಆ ಹೂಗಳಿಂದ ಅಲಂಕರಿಸಲಾಗುತ್ತಿತ್ತು. ಸತ್ಸಂಗಗಳು ನಡೆಯುತ್ತಿದ್ದವು. ಡಾಕ್ಟರ್ ದುರ್ಗಾಪದರು, ''ಮಹಾರಾಜರನ್ನು ಹೆಚ್ಚು ಮಾತಾಡಿಸಬೇಡಿ, ಅವರಿಗೆ ಪೂರ್ಣ ವಿಶ್ರಾಂತಿಯ ಅಗತ್ಯವಿದೆ'' ಎಂದು ಭಕ್ತರನ್ನು ಆಗಾಗ ಎಚ್ಚರಿಸುತ್ತಿದ್ದರು.

*(ಮುಂದುವರಿಯುವುದು)*